## ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.401/2018

| | | |
|---|---|---|
| ಸಾಕ್ಷಿದಾರರ ಹೆಸರು | - ಕವಿತ | ಸಿಡಬ್ಲ್ಯೂ-1 |
| ತಂದೆಯ ಹೆಸರು | - ಓಬಯ್ಯ | ಪಿಡಬ್ಲ್ಯೂ-1 |
| ವಯಸ್ಸು | - 29 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ | - ಚಳ್ಳಕೆರೆ | |

**ದಿನಾಂಕಃ23.06.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

### ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ

ನನಗೆ ಚಾಸಾ.2 ರಿಂದ 20 ಪರಿಚಯವಿಲ್ಲ. ಸುಮಾರು 5 ವರ್ಷಗಳ ಹಿಂದೆ ಒಂದು ಟೆಂಪೋದಲ್ಲಿ ನಾನು ಚಳ್ಳಕೆರೆ ಕಡೆಯಿಂದ ಐಮಂಗಲದ ಕಡೆಗೆ ಹೋಗುತ್ತಿದ್ದೆ. ಸದರಿ ಟೆಂಪೋದಲ್ಲಿ ನನ್ನ ಜೊತೆ ಇತರೆ 10 ಪ್ರಯಾಣಿಕರು ಇದ್ದರು. ಸದರಿ ಟೆಂಪೋ ಯಾರು ಚಾಲನೆ ಮಡುತ್ತಿದ್ದರು ಗೊತ್ತಿಲ್ಲ. ಅಪಘಾತ ಯಾವ ಸ್ಥಳದಲ್ಲಿ ಆಗಿದೆ ಎಂದು ಗೊತ್ತಿಲ್ಲ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲ. ಅಪಘಾತದಲ್ಲಿ ನನ್ನ ಬಲಭುಜಕ್ಕೆ ಪೆಟ್ಟಾಗಿರುತ್ತದೆ. ಬೇರೆ ಪ್ರಯಾಣಿಕರಿಗೆ ಏನಾಗಿದೆ ಎಂದು ಗೊತ್ತಿಲ್ಲ. ಅಪಘಾತದ ನಂತರ ನಾನು ಹಿರಿಯೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದೆ. ಸಾಕ್ಷಿಯು ದೂರಿನಲ್ಲಿರುವ ಸಹಿ ನೋಡಿ ಗುರುತಿಸಿದ್ದು ಸದರಿ ದಾಖಲೆ ನಿಪಿ-1 ಎಂದು, ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ಕ್ಕೆ ಎಲ್ಲಿ ಮತ್ತುಯಾವಾಗ ಸಹಿ ಮಾಡಿದ್ದೆ ಎಂದು ಗೊತ್ತಿಲ್ಲ. ನಿಪಿ-1 ರಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ ಮತ್ತು ಪೊಲೀಸರು ನನಗೆ ಓದಿ ಹೇಳಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

### ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ದಿಃ03.02.2018 ರಂದು ಟೆಂಪೋ ನಂ.ಕೆಎ.13.7057 ಇದರಲ್ಲಿ ನಾನು ಇತರೆ 20 ಜನ ಪ್ರಯಾಣಿಕರು ಚಳ್ಳಕೆರೆಯಿಂದ ಐಮಂಗಲಕ್ಕೆ ಪ್ರಯಾಣಿಸುತ್ತಿದ್ದೆವು ಅಂದರೆ ನಿಜ. ಸದರಿ ವಾಹನ ಅನಿಲ್ ಕುಮಾರ್ ಎಂಬುವವನು ಚಾಲನೆ ಮಾಡುತ್ತಿದ್ದು ಬೆಳಗಿನ ಜಾವ 4 ಗಂಟೆ ಸಮಯದಲ್ಲಿ ಎನ್ ಹೆಚ್ 150(ಎ) ರಸ್ತೆ ಮೇಲೆ ಗನ್ನಾಯಕನಹಳ್ಳಿ ಕ್ರಾಸ್ ನಲ್ಲಿ ತಿರುಗಿಕೊಂಡು ಗನ್ನಾಯಕನಹಳ್ಳಿ ಮೇಟಿಕುರ್ಕೆ ರಸ್ತೆಯಲ್ಲಿ ಬರುತ್ತಿರುವಾಗ ಸದರಿ ವಾಹನ ಚಾಲಕ ಅತಿವೇಗ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿದ್ದರಿಂದ ನಾವು ಪ್ರಯಾಣಿಸುತ್ತಿದ್ದ ಟಾಟಾ ಮ್ಯಾಜಿಕ ವಾಹನವು ರಸ್ತೆಯ ಬಲಕ್ಕೆ ಕೆಡವಿ ಅಪಘಾತ ಪಡಿಸಿದ್ದ ಎಂದರೆ ನಿಜ. ಸದರಿ ಅಪಘಾತದಲ್ಲಿ ನನ್ನ ಕೈಕಾಲುಗಳಿಗೆ ಮತ್ತು ಮೈಕೈಗೆ ಪೆಟ್ಟುಗಳಾದವು ಮತ್ತು ವಾಹನ ಜಖಂ ಆಯಿತು ಎಂದರೆ ನಿಜ. ನಮ್ಮ ಜೊತೆ ಪ್ರಯಾಣಿಸುತ್ತಿದ್ದ ಸೂರಮ್ಮ ಗಂಡ ತಿಪ್ಪಯ್ಯ ಎಂಬ ಮಹಿಳೆ ತಲೆಗೆ ಪೆಟ್ಟಾಗಿ ಹಿರಿಯೂರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಮೃತ ಪಟ್ಟಿದ್ದಾಳೆ ಎಂದರ ಸೂಚಿಸುವುದು ಸರಿಯಲ್ಲ. ಈ ವಿಷಯದ ಬಗ್ಗೆ ಪೊಲೀಸರು ನಾನು ಹಿರಿಯೂರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ದಿಃ03.02.2018 ರಂದು ಬೆಳಿಗ್ಗೆ 9 ಗಂಟೆಗೆ ನಿಪಿ-1 ರಲ್ಲಿ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ1 ರಂತೆ ಹೇಳಿಕೆ ಕೊಟ್ಟರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎಸ್ ಎಂ ಆರ್ ವಕೀಲರಿಂದಃ**

ನಿಪಿ-1 ರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ, ಪೊಲೀಸರು ಹೇಳಿದಂತೆ ಸದರಿ ದಾಖಲೆಗೆ ಸಹಿ ಮಾಡಿದ್ದೇನೆ ಎಂದರೆ ನಿಜ. ನಾವು ಪ್ರಯಾಣಿಸುತ್ತಿದ್ದ ವಾಹನ ಯಾರು ಚಾಲನೆ ಮಾಡುತ್ತಿದ್ದರು ಎಂದು ಗೊತ್ತಿಲ್ಲ. ಸದರಿ ದಿನ ವಾಹನವನ್ನು ಚಾಲಕನು ಸರಿಯಾಗಿ ಚಾಲನೆ ಮಾಡುತ್ತಿದ್ದ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಅನ್ನುವುದು ನನಗೆ ಗೊತ್ತಿಲ್ಲ.

ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ನಿಜ. ಆ ದಿನ ಆರೋಪಿ ವೇಗವಾಗಿ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಲ್ಲ ಕೇವಲ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು